# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ

## ದಿನಾಂಕ: 20.02.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 20.02.2021ರಂದು ವಾರ್ಡ್ ಸಂಖ್ಯೆ 129ರ ಫೆಬ್ರವರಿ ಮಾಹೆಯ ಮೂರನೇ ಶನಿವಾರದ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಹಾಜರಿದ್ದ ಸದಸ್ಯರು:–**

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು. (ರಜೆಯಲ್ಲಿರುತ್ತಾರೆ)
2. ಶ್ರೀ.ಎಂ.ಕೆ ಗುರುಕುಮಾರ್, ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ–129 (ಪ್ರಭಾರ) ಹಾಗೂ ಸ.ಕಾ.ಅ (ಘ.ತ್ಯಾ.ನಿ ರಾರಾನಗರ ಉಪವಿಭಾಗ)
3. ಶ್ರೀ.ಸತೀಶ್, ಸ.ಅ ಬೃ.ನೀ.ಗಾ ವಾರ್ಡ್–129.
4. ಶ್ರೀಮತಿ ಮೀನಾ ಎಸ್ ಬಿ.ಎಲ್.ಓ, ವಾರ್ಡ್–129.
5. ಶ್ರೀಮತಿ ರಾಜೇಶ್ವರಿ ಎಸ್ ಬಿ.ಎಲ್.ಓ, ವಾರ್ಡ್–129.
6. ಶ್ರೀ ಷಟ್ಟಾಳಯ್ಯ ಜಿ ಸೂಪರ್ ವೈಸರ್ ವಾರ್ಡ್–129.
7. ಶ್ರೀ ಸೂರಪ್ಪ ಸೂಪರ್ ವೈಸರ್ ವಾರ್ಡ್–129.
8. ಶ್ರೀ ರಾಮಾಂಜಿನಲು ಸೂಪರ್ ವೈಸರ್ ವಾರ್ಡ್–129.
9. ಶ್ರೀ ರಘು ಸೂಪರ್ ವೈಸರ್ ವಾರ್ಡ್–129.
10. ಶ್ರೀ ಬಾಲು ಸೂಪರ್ ವೈಸರ್ ವಾರ್ಡ್–129.
11. ಶ್ರೀ ನವೀನ್ ಸಾರ್ವಜನಿಕರು ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ.
12. ಶ್ರೀ ರಾಮಣ್ಣ ಸಾರ್ವಜನಿಕರು, ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿಯ ನಿವಾಸಿಯಾದ ಶ್ರೀ ನವೀನ್ ಹಾಗೂ ಶ್ರೀ ರಾಮಣ್ಣರವರು ವಾರ್ಡ್ ವ್ಯಾಪ್ತಿಯಲ್ಲಿನ 1ನೇ ಡಿ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಬೀದಿ ಬದಿ ಕಸ ಗುಡಿಸಲು ಪೌರ ಕಾರ್ಮಿಕರು ಬರುತ್ತಿಲ್ಲವೆಂದು ದೂರು ನೀಡಿದರು ಇದಕ್ಕೆ ಉತ್ತರಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ನಮ್ಮಲ್ಲಿ ಕೇವಲ 86 ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಹೆಚ್ಚಿನ ಅಗತ್ಯವಿರುವ 177 ಪೌರ ಕಾರ್ಮಿಕರನ್ನು ನಿಯೋಜಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತುತ ಕಡತವು ಅನುಮೋದನೆ ಹಂತದಲ್ಲಿದ್ದು ಅನುಮೋದನೆಗೊಂಡು ಪೌರ ಕಾರ್ಮಿಕರ ನಿಯೋಜನೆಯಾದಲ್ಲಿ ಬೀದಿ ಬದಿಕಸ ಗುಡಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು
- ಹಸಿ ಕಸ ಒಣ ಕಸ ಸರಿಯಾಗಿ ಸಂಗ್ರಹಿಸುತ್ತಿಲ್ಲವೆಂದು ದೂರಿದ ಮೇರೆಗೆ ಉತ್ತರಿಸಿದ ಸೂಪರ್ ವೈಸರ್‌ಗಳು ಕಾಂಪ್ಯಾಕ್ಟರ್ ಗಳ ಕೊರತೆಯಿದ್ದು ಹೆಚ್ಚಿನ ಕಾಂಪ್ಯಾಕ್ಟರ್ ಗಳನ್ನು ಒದಗಿಸುವಂತೆ ಕೋರಿದರು ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರು ಸೂಕ್ತ ಕ್ರಮ ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

- ಶ್ರೀಮತಿ ಶೋಭ ಭಟ್ ರವರು ಈ ಕೆಳಕಂಡ ದೂರು/ಕೋರಿಕೆಗಳನ್ನು ಸಲ್ಲಿಸಿದರು.

- ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಗೆ ನಿಷೇಧವಿದ್ದರೂ ಹಲವು ವಾಣಿಜ್ಯ ಮಳಿಗೆಗಳಲ್ಲಿ ಉಪಯೋಗಿಸುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕ್ರಮ ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- 1ನೇ ಮುಖ್ಯರಸ್ತೆ, ಹೆಲ್ತ್ ಬಡಾವಣೆಯ ಅಪಾರ್ಟ್‌ಮೆಂಟ್ ಒಂದರ ನಿವಾಸಿಗಳಿಗೆ ಕಸವನ್ನು ಕಡ್ಡಾಯವಾಗಿ ಪಾಲಿಕೆಯ ಕಸ ಸಂಗ್ರಹಣಾ ವಾಹನಗಳಿಗೆ ನೀಡಲು ಸೂಚಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- ಬಂಟಿಂಗ್ಸ್ ಹಾಗೂ ಪೋಸ್ಟರ್ಸ್ ಅಂಟಿಸುವುದು ನಿಷೇಧಿಸಲಾಗಿದ್ದರೂ ರಸ್ತೆ ಬದಿ ಮರಗಳಲ್ಲಿ ಅಂಟಿಸಿರುವುದು ಕಂಡು ಬಂದಿದ್ದು ಶೀಘ್ರವೇ ತೆರವುಗೊಳಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- ಶ್ರೀ ಗಂಧದ ಕಾವಲು ಬಳಿ ಮನೆ ಮನೆಗಳಿಂದ ಕಸ ಸಂಗ್ರಹಿಸುವ ವಾಹನಗಳಿಂದ Container ಗಳಿಗೆ ಕಸವನ್ನು ತುಂಬಿಸುವ ಪ್ರಕ್ರಿಯೆಯನ್ನು ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ನಿಯಮಗಳನುಸಾರ ಕೈಗೊಳ್ಳಲು ಕೋರಿದರು.

ಕ್ರಮ:– ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಅನ್ನಪೂರ್ಣೇಶ್ವರಿ ನಗರ ಮುಖ್ಯರಸ್ತೆ, ಉಲ್ಲಾಳು ಮುಖ್ಯರಸ್ತೆಯಲ್ಲಿ ರಸ್ತೆ ಬದಿ ಬೀದಿ ಬದಿ ವ್ಯಾಪಾರಿಗಳು ಹಾಗೂ ವಾಣಿಜ್ಯ ಮಳಿಗೆಗಳ ಮಾಲೀಕರು ಫುಟ್ ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದು, ಫುಟ್ ಪಾತ್ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸುವಂತೆ ಸಾರ್ವಜನಿಕರು ಕೋರಿದರು.

ಕ್ರಮ: ಸಹಾಯಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು.

- ಜೋಸೆಫ್ ಶಾಲೆಯ ಹತ್ತಿರ ಅನ್ನಪೂರ್ಣೇಶ್ವರಿ ನಗರದಿಂದ ಶ್ರೀಗಂಧದ ಕಾವಲು ಬಸ್ ಸ್ಟಾಪ್ ವರೆಗಿನ ರಸ್ತೆ ಬದಿ ಚರಂಡಿ ಅಭಿವೃದ್ಧಿಪಡಿಸಲು ಕೋರಿದರು ಈ ಸಂಬಂಧ ಸಹಾಯಕ ಅಭಿಯಂತರರು ಮುಂಬರುವ ಅನುದಾನದಲ್ಲಿ ಸದರಿ ಚರಂಡಿಯನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.

  ಕ್ರಮ: ಸಹಾಯಕ ಅಭಿಯಂತರರು ವಾರ್ಡ್–129.

- ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿಯ ಸಿದ್ವಿನ್ ಅಪಾರ್ಟ್ ಮೆಂಟ್ ಹತ್ತಿರ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಸರಿಯಾಗಿ ಕಲ್ಪಿಸದ ಕಾರಣ ಮಳೆ ನೀರು ಸರಿಯಾಗಿ ಹರಿಯದೇ ಮಣ್ಣು ಕುಸಿತ ಉಂಟಾಗುತ್ತಿದ್ದು ಇದರಿಂದ ಅಕ್ಕಪಕ್ಕದ ಮನೆಗಳು ಗೋಡೆಗಳು ಬಿರುಕು ಬಿಡುತ್ತಿರುತ್ತದೆ ಈ ಬಗ್ಗೆ ಮಾನ್ಯ ಜಂಟಿ ಆಯುಕ್ತರ ಗಮನಕ್ಕೆ ತಂದು ಪಾಲಿಕೆ ವತಿಯಿಂದ ನೀಡಲಾದ ವಿನ್ಯಾಸದಂತೆ ಮಳೆ ನೀರು ಕೊಯ್ಲು ಅಳವಡಿಸದ ಸಿದ್ವಿನ್ ಅಪಾರ್ಟ್ ಮೆಂಟ್ ರವರಿಗೆ ನೀಡಲಾಗಿರುವ ಸ್ವಾಧೀನಾನುಭವ ಪತ್ರ (OC) ಯನ್ನು ರದ್ದುಗೊಳಿಸಿ ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗದಂತೆ ಹಾಗೂ ಯಾವುದೇ ರೀತಿಯ ಅಪಾಯವಾಗದಂತೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಎನ್.ಜಿ.ಇ.ಎಫ್ ಬಡಾವಣೆ ನಿವಾಸಿಗಳು ಕೋರಿದರು.

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಮೇಲಿನ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು, ಅವರ ವ್ಯಾಪ್ತಿಯ ದೂರುಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ವರದಿ ಮಾಡಲು ತಿಳಿಸಿದೆ.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ–129 | ವಾರ್ಡ್ ಸಂಖ್ಯೆ–129 |

***ಪ್ರತಿಯನ್ನು:***

1. ಆಪ್ತಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾರಾನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.